

# ಸರ್ಜರಿಯಿಲ್ಲದೆ ಮೆದುಳು ಗಡ್ಡೆ ಕರಗಿಸಬಹುದು!

ಮೆದುಳಿನಲ್ಲಿ ಗಡ್ಡೆ (ಬ್ರೈನ್ ಟ್ಯೂಮರ್) ಆಗಿದ್ದರೆ ಅದಕ್ಕೆ ಶಸ್ತ್ರಚಿಕಿತ್ಸೆ ಒಂದೇ ದಾರಿ ಎಂಬ ವೈದ್ಯಕೀಯ ನಿಯಮ ಇದೀಗ ಬದಲಾಗಿದೆ. ಈ ಗಡ್ಡೆಗಳ ನಿರ್ವಹಣೆಗೆ ಅತ್ಯಾಧುನಿಕ ಚಿಕಿತ್ಸೆ ಈಗ ಲಭ್ಯ. ಸರ್ಜರಿ ಇಲ್ಲದೆ 28 ದಿನಗಳ ಮ್ಯಾಗ್ನೆಟಿಕ್ ಥೆರಪಿ ಮೂಲಕ ಈ ಅಪಾಯಕಾರಿ ಕಾಯಿಲೆಯನ್ನು ಸಂಪೂರ್ಣವಾಗಿ ಗುಣಪಡಿಸಬಹುದು.

■ ಉಮಾ ವೇಣೂರು

ತುಮಕೂರಿನ ಆಟೊ ಚಾಲಕ ಶಶಿಧರ್‌ಗೆ ವಿಪರೀತ ತಲೆನೋವು, ನಿಶ್ಯಕ್ತಿ, ಕೈಕಾಲುಗಳಲ್ಲಿ ಸಹಸಲಾರದಷ್ಟು ನೋವು, ಮೇಲಾಗಿ ಪದೇ ಪದೇ ಬರುವ ತಲೆಸುತ್ತು. ಸಾಮಾನ್ಯ ಸಮಸ್ಯೆ ಎಂದು ಸ್ಥಳೀಯ ವೈದ್ಯರ ಬಳಿ ತೋರಿಸಿದಾಗ ಇದು ನರಕ್ಕೆ ಸಂಬಂಧಿಸಿದ ಸಮಸ್ಯೆ, ಬೆಂಗಳೂರಿನ ನಿಮ್ಹಾನ್ಸ್‌ನಲ್ಲಿ ತಜ್ಞ ವೈದ್ಯರಲ್ಲಿ ತೋರಿಸಲು ಸೂಚಿಸಿದರು. ಅದರಂತೆ ನಿಮ್ಹಾನ್ಸ್‌ನಲ್ಲಿ ಎಂಆರ್‌ಐ ಸ್ಕ್ಯಾನ್ ಮಾಡಿಸಿ ತಪಾಸಣೆ ನಡೆಸಿದಾಗ ಮೆದುಳಿನಲ್ಲಿ ಗಡ್ಡೆ ಇರುವುದು ಪತ್ತೆಯಾಯಿತು. ಅಲ್ಲಿನ ವೈದ್ಯರ ಸಲಹೆಯಂತೆ ಕಿದ್ವಾಯಿ ಆಸ್ಪತ್ರೆಯಲ್ಲಿ ರೇಡಿಯೇಷನ್ ಮತ್ತು ಕೀಮೊಥೆರಪಿ ಚಿಕಿತ್ಸೆ ಕೂಡ ಪಡೆದದ್ದಾಯಿತು. ಆರು ತಿಂಗಳು ಚಿಕಿತ್ಸೆ ಪಡೆದರೂ ಯಾವುದೇ ಪ್ರಯೋಜನ ಕಾಣಲಿಲ್ಲ. ಸ್ನೇಹಿತರ ಸಲಹೆಯಂತೆ ಬೆಂಗಳೂರಿನ ಮಾರತ್‌ಹಳ್ಳಿಯಲ್ಲಿರುವ ಎಸ್‌ಬಿಐಫ್

